# ಆ ಮಾತುಗಳೇ ಕೊನೆ ಅಂದುಕೊಂಡಿರಲಿಲ್ಲ..!

(29ನೇ ಪುಟದಿಂದ)

ವಿಷ್ಣು ಸಾರ್ ಜತೆ ಪಾತ್ರ ಅಂತ ಮೊದಲು ಮಾಡಿದ್ದು ಕರುಣಾಮಯಿ ಚಿತ್ರದಲ್ಲಿ– ಅವರ ತಂಗಿಯಾಗಿ. ಭಾರ್ಗವರ ನಿರ್ದೇಶನ.

ಆ ಸಿನಿಮಾದಲ್ಲಿ ಒಂದು ದೃಶ್ಯ ಬರುತ್ತೆ. ಅಣ್ಣ ತಂಗಿ ಇಬ್ಬರೂ ಅಳುತ್ತಾ ಮಾತನಾಡಬೇಕು. ಅದೇನನ್ನಿಸಿತೋ ಏನೋ.. ಇಬ್ಬರೂ ದೃಶ್ಯದಲ್ಲಿ ತಲ್ಲೀನರಾಗಿ ಗ್ಲಿಸರಿನ್ ಇಲ್ಲದೆ ಅಳತೊಡಗಿದ್ದೆವು. ಆ ಸೀನ್ ಮಾಡಿ ಮುಗಿಸಿದಾಗ ನಿರ್ದೇಶಕ ಭಾರ್ಗವ ಇಬ್ಬರನ್ನು ಅಪ್ಪಿಕೊಂಡರು. ಆ ಕ್ಷಣದಿಂದಲೇ ನನ್ನ ಮನಸ್ಸಿನಲ್ಲಿ ವಿಷ್ಣು ಸಾರ್ ಅಣ್ಣನಾಗಿ ಸ್ಥಿರವಾಗಿ ನಿಂತರು.

ಮೊದ ಮೊದಲು ವಿಷ್ಣು ಸಾರ್ ಅಷ್ಟೊಂದು ಆತ್ಮೀಯವಾಗಿ ಯಾರೊಟ್ಟಿಗೆಯೂ ಬೆರೆಯುತ್ತಿರಲಿಲ್ಲ. ಅವರಿಗೆ ಅವರದ್ದೇ ಆದ 'ಸೆಲೆಕ್ಟೆಡ್ ಸ್ನೇಹಿತ'ರಿದ್ದರು. ಸಹ ಕಲಾವಿದರೊಂದಿಗೂ ಅಷ್ಟೆ. ಆದರೆ ಮುಂದೊಂದು ದಿನ ವಿಷ್ಣು ಸಾರ್‌ರ 'ಡಾಕ್ಟರ್ ಕೃಷ್ಣ' ಚಿತ್ರಕ್ಕೆ ನಾನು ನಾಯಕಿ ಆದೆ.

ಅದೂ ಇನ್ನೊಂದು ಕಥೆ. 'ದೇವಾ' ಚಿತ್ರದ ಚಿತ್ರೀಕರಣದಲ್ಲಿದ್ದಾಗ ನಿರ್ದೇಶಕ ಫಣಿ ರಾಮಚಂದ್ರರು ಅವರ ಮೊದಲ ಚಿತ್ರದ ಚರ್ಚೆಗಾಗಿ ವಿಷ್ಣು ಸಾರ್‌ರನ್ನು ನೋಡಲು ಆ ಸೆಟ್‌ಗೆ ಬರ್ತಿದ್ರು. ಬೇರೊಬ್ಬ ನಟಿಯನ್ನು ನಾಯಕಿಯನ್ನಾಗಿ ಮಾಡುವುದು ಅವರ ಇಚ್ಛೆಯಾಗಿತ್ತು. ಅಲ್ಲೇ ಇದ್ದ ನನ್ನನ್ನ ವಿಷ್ಣು ಸಾರ್ ಕರೆದರು. 'ಈ ಹುಡುಗಿ ನಾಯಕಿ ಯಾಕಾಗಬಾರ್ದು?' ಎಂದು ಫಣಿಗೆ ಹೇಳಿ ನನ್ನನ್ನು 'ಡಾಕ್ಟರ್ ಕೃಷ್ಣ' ಚಿತ್ರದ ನಾಯಕಿಯನ್ನಾಗಿ ಮಾಡಿದ್ರು.

ನನ್ನ ಚಿತ್ರ ಜೀವನ ಕಲಾತ್ಮಕ ಚಿತ್ರಗಳತ್ತ ಹೊರಳಿದಾಗ, ಆ ಚಿತ್ರಗಳಿಗೆ ಯಶಸ್ಸು, ಪ್ರಶಂಸೆ, ಪ್ರಶಸ್ತಿಗಳು ಬಂದಾಗ ವಿಷ್ಣು ಸಾರ್ ವೈಯಕ್ತಿಕವಾಗಿ ಅಭಿನಂದಿಸುತ್ತಿದ್ದರು. ಹಾಗೆಯೇ, ತಾವೂ ಇಂತಹ ಚಿತ್ರಗಳಲ್ಲಿ ನಟಿಸಬೇಕೆಂದು ಹೇಳುತ್ತಿದ್ದರು. ಈ ವಿಷಯವಾಗಿ ನಾನು ಒಂದಿಬ್ಬರು ಹಿರಿಯ ನಿರ್ದೇಶಕರ ಬಳಿ ಮಾತಾಡಿದ್ದೆ. ಅವರೂ ಆಸಕ್ತಿ ತೋರಿಸಿದ್ದರು. ಆದರೆ ವಿಷ್ಣು ಸಾರ್ ಯಾಕೋ ಹಿಂಜರಿದಿದ್ದರು. 'ಇದು ನನ್ನ ಅಭಿಮಾನಿಗಳಿಗೆ ಇಷ್ಟವಾಗುತ್ತೋ ಇಲ್ಲವೋ' ಎಂದು ಹೇಳುತ್ತಿದ್ದರು. ನನ್ನ ಮದುವೆ ತಡವಾಗ್ತಿದ್ದಾಗ, 'ನೀನು ಬೇಗ ಮದ್ವೆ ಆಗ್ಬೇಕಮ್ಮಾ' ಎನ್ನುತ್ತಿದ್ದರು. 'ನೀನು ಮದ್ವೆ ಆಗ್ತೀಯೋ.. ಅಥವಾ ನಾನೇ ವರನ್ನ ಹುಡುಕ್ಲಾ' ಎಂದೂ ಛೇಡಿಸುತ್ತಿದ್ದರು. ನಾನು ವೇಣೂನ ಮದ್ವೆ ಆದಾಗ ಬಹಳ ಸಂತೋಷಪಟ್ಟ ಕುಟುಂಬದಲ್ಲಿ ಅವರ ಕುಟುಂಬವೂ ಒಂದು. ಆ ದಂಪತಿ ನಮ್ಮಿಬ್ಬರನ್ನೂ ಕರೆಸಿ ಸತ್ಕರಿಸಿ, ಆಶೀರ್ವದಿಸಿದ್ದರು.

'ಮಾತಾಡ್ ಮಾತಾಡ್ ಮಲ್ಲಿಗೆ' ಚಿತ್ರೀಕರಣದ ಸಮಯದಲ್ಲಿ ಯಾಕೋ ಇದ್ದಕ್ಕಿದ್ದ ಹಾಗೇ 'ನೀನು ರಾಜಕಾರಣಿ ಆಗ್ತೀಯಾ' ಅಂದಿದ್ದರು. ನನಗೆ ಇದು ತಮಾಷೆ ಎನ್ನಿಸಿ, 'ಯಾಕ್ಸಾರ್, ನಾನ್ ಏನ್ ತಪ್ಪು ಮಾಡಿದ್ದೀನಿ' ಅಂದೆ. 'ನೀನು ನಿಜವಾದ ಒಳ್ಳೇ ರಾಜಕಾರಣಿ ಆಗ್ತಿಯ ಅಂತ ನನಗನ್ನಿಸಿದೆ, ನೀನು ಒಳ್ಳೆ ನಾಯಕಿ ಆಗ್ತೀಯ. ಆಗ ನಿನ್ನಿಂದ ಚಿತ್ರರಂಗಕ್ಕೆ ಒಳ್ಳೆಯ ಕೆಲಸ ಆಗ್ಬೇಕು' ಅಂದ್ರು. ಆದ್ರೆ, ಸ್ವತಃ ನನಗೆ ರಾಜಕೀಯ ಪ್ರವೇಶದ ಬಗ್ಗೆ ಆಲೋಚನೆ ಇರಲಿಲ್ಲ.

ಮುಂದೆ ನಾನು ಬಿಜೆಪಿ ಸೇರಿದ ವಿಷಯ ವಿಷ್ಣು ಸಾರ್‌ಗೆ ಗೊತ್ತಾದಾಗ, 'ನೋಡು ನಾನು ಹೇಳಿರ್ಲಿಲ್ವ, ಹೀಗೊಂದು ದಿನ ಬರುತ್ತೆ ಅಂತ. ಏನೇ ಅಡೆ–ತಡೆ ಬಂದ್ರೂ ಅದನ್ನು ಎದುರಿಸಿ ರಾಜಕೀಯ ರಂಗದಲ್ಲಿ ನೀನು ಸಾಧನೆ ಮಾಡಬೇಕು' ಎಂದರು. ಆ ಬಳಿಕ ಎಲ್ಲೇ ಭೇಟಿ ಮಾಡಿದ್ರೂ, 'ರಾಜಕೀಯ ರಂಗವನ್ನು ಸೀರಿಯಸ್ಸಾಗಿ ತಗೋ' ಅಂತ ಅಡ್ವೈಸ್ ಮಾಡ್ತಿದ್ರು. ಅವರ ಮನೆಯಲ್ಲಿ ಯಾವುದೇ ಪೂಜೆ ಆಗ್ಲಿ, ಏನೇ ವಿಶೇಷವಾಗ್ಲಿ, ನಮ್ಮಿಬ್ಬರಿಗೆ ಆಹ್ವಾನ ಇರುತ್ತಿತ್ತು. ಅಕಸ್ಮಾತ್ ಆ ದಿನ ನಾವು ಹೊಗಲಿಕ್ಕೆ ಆಗದಿದ್ರೆ 'ಯಾಕ್ ಬರಲಿಲ್ಲ' ಅಂತ ಫೋನ್ ಮಾಡಿ ವಿಚಾರಿಸುವಷ್ಟು ಆತ್ಮೀಯತೆ ಇತ್ತು. ನನ್ನ ಹಳೆಯ ಚಿತ್ರ ಟಿ.ವಿ.ಯಲ್ಲಿ ಬಂದಾಗ, ಟಿ.ವಿ. ಕಾರ್ಯಕ್ರಮದಲ್ಲಿ ನಾನು ಕಾಣಿಸಿಕೊಂಡಾಗಲೆಲ್ಲ ತಕ್ಷಣ ಫೋನ್ ಮಾಡಿ ಅದಕ್ಕೆ ರಿಯಾಕ್ಟ್ ಮಾಡುತ್ತಿದ್ದರು.

ಇತ್ತೀಚೆಗಷ್ಟೆ ಟಿ.ವಿ ಚಾನೆಲ್ ಒಂದರಲ್ಲಿ ನನ್ನ ಕಾರ್ಯಕ್ರಮ ನೋಡಿ ಫೋನ್ ಮಾಡಿದ್ದರು. 'ಈ ನಡುವೆ ನೀನು ಬಹಳ ಚೆನ್ನಾಗಿ ಮಾತಾಡೋದನ್ನ ಕಲ್ತಿದೀಯ. ನನಗ್ಯಾಕೋ ನಿನ್ನಿಂದ ಹಲವಾರು ಜನರಿಗೆ ಒಳ್ಳೆಯದಾಗುತ್ತೆ ಅನ್ನೋ ಭಾವನೆ ಬರ್ತಿದೆ. ನಿನ್ನ ಕಾಯಕವನ್ನು ಮನಸಾರೆ ಮಾಡು. ದೇವರು ನಿನ್ನೊಂದಿಗೆ ಸದಾ ಇರುತ್ತಾನೆ' ಎಂದು ಆಶೀರ್ವಾದ ಮಾಡಿದ್ದರು. ಆದರೆ ಅವರ ಈ ಮಾತುಗಳು ಕೊನೆಯ ಮಾತುಗಳಾಗುತ್ತವೆ ಎಂದು ನಾನು ಖಂಡಿತವಾಗಿಯೂ ಅಂದುಕೊಂಡಿರಲಿಲ್ಲ.

ಸಾರ್, ದೇಹದಿಂದ ನೀವು ದೂರವಾಗಿರಬಹುದು. ಆದರೆ ನಮ್ಮ ಮನಸ್ಸಿನಲ್ಲಿ, ಹೃದಯದಲ್ಲಿ ಸದಾ ನೀವು ಇರ್ತೀರಿ. ನೀವಿಲ್ಲದ ದುಃಖವನ್ನು ಭರಿಸುವ ಶಕ್ತಿಯನ್ನು ಭಾರತಿ ಅಮ್ಮನವರಿಗೆ, ನಿಮ್ಮ ಕುಟುಂಬ ವರ್ಗದವರಿಗೆ, ಅಭಿಮಾನಿಗಳಿಗೆ ಆ ಭಗವಂತ ಕರುಣಿಸಲಿ. ಕೊನೆಯದಾಗಿ ನನ್ನದೊಂದು ಕೋರಿಕೆ– ನನ್ನ ಮಗುವಾಗಿ ಬನ್ನಿ ವಿಷ್ಣು ಸಾರ್..' ■



ವಿಷ್ಣು ಪಾರ್ಥಿವ ಶರೀರಕ್ಕೆ ಅಂತಿಮ ಗೌರವ